ಕರ್ನಾಟಕ ಸರ್ಕಾರ

# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಡಾ।। ಕೆ. ಶ್ರೀನಿವಾಸ್.
ಕುಲಸಚಿವರು

ಶ್ರೀ ದೇವರಾಜ್ ಅರಸ್ ಬಡಾವಣೆ
ಟಮಕ, ಕೋಲಾರ – 563 103
ದೂರವಾಣಿ : +91 8152 243152
+91 8152 243153
ಇ-ಮೇಲ್: registrar@bnu.ac.in

ಬೆ.ಉ.ವಿ./ಜೇಷ್ಠತಾ ಪಟ್ಟಿ/450/2019–20 ದಿನಾಂಕ: 06.06.2019

## ಸುತ್ತೋಲೆ

**ವಿಷಯ:** ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವ್ಯಾಪ್ತಿಯ ಸಂಯೋಜಿತ ಕಾಲೇಜು ಶಿಕ್ಷಕರ ಸಾಮಾನ್ಯ ಮತ್ತು ವಿಷಯವಾರು ಜೇಷ್ಠತಾ ಪಟ್ಟಿ ರಚನೆಗೆ ಅರ್ಹ ಕಾಲೇಜು ಶಿಕ್ಷಕರು ಸಂಬಂಧಿಸಿದ ಮಾಹಿತಿ ಮತ್ತು ಅಧಿಕೃತ ದಾಖಲೆಗಳನ್ನು ನೀಡುವ ಬಗ್ಗೆ.

****

ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ವಿವಿಧ ಪ್ರಾಧಿಕಾರ ಮತ್ತು ಸಮಿತಿಗಳಿಗೆ (ಸಿಂಡಿಕೇಟ್, ನಿಖಾಯ, ಅಧ್ಯಯನ ಮಂಡಳಿ, ಪರೀಕ್ಷಾ ಮಂಡಳಿ, ವಿಶೇಷ ವಿಷಯ ಮಂಡಳಿ, ಸಾಮಾನ್ಯ ಸಮಿತಿ, ಜಾಗೃತ ದಳ ಇತ್ಯಾದಿ) ಕಾಲೇಜು ಶಿಕ್ಷಕರನ್ನು ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲು ಕಾಲೇಜು ಶಿಕ್ಷಕರ ಅಧೀಕೃತ ಸಾಮಾನ್ಯ ಮತ್ತು ವಿಷಯವಾರು (Subject wise) ಜೇಷ್ಠತಾ ಪಟ್ಟಿಯನ್ನು ರಚಸಿ ಪ್ರಕಟಿಸಲು ಕ್ರಮ ಕೈಗೊಂಡಿದೆ. ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ಹೊಸದಾಗಿ ಪ್ರಾರಂಭಗೊಂಡಿರುವುದರಿಂದ ವಿಶ್ವವಿದ್ಯಾಲಯ ವ್ಯಾಪ್ತಿಯ ಸಂಯೋಜಿತ ಅರ್ಹ ಕಾಲೇಜು ಅಧ್ಯಾಪಕರ (ಪ್ರಾಂಶುಪಾಲರು ಸೇರಿದಂತೆ) ಜೇಷ್ಠತಾ ಪಟ್ಟಿಯನ್ನು ಹೊಸದಾಗಿ ರಚಿಸಿ, ಪರಿಷ್ಕರಿಸಿ ಪ್ರಕಟಿಸಬೇಕಾಗಿದೆ.

ಆದ್ದರಿಂದ ಎಲ್ಲಾ ಅರ್ಹ ಕಾಲೇಜು ಶಿಕ್ಷಕರು ತಮ್ಮ ವಿಷಯ ಹಾಗೂ ಸೇವಾ ವಿವರಗಳನ್ನು ಸೂಕ್ತ ಮತ್ತು ಅಧೀಕೃತ ದಾಖಲಾತಿಗಳೊಂದಿಗೆ ವಿಶ್ವವಿದ್ಯಾಲಯದ ವೆಬ್ ಸೈಟ್ ಮೂಲಕ ಅಪ್‌ಲೋಡ್ ಮಾಡಬೇಕೆಂದು ಕೋರಿಕೊಳ್ಳಲು ನಿರ್ದೇಶಿಸಲಾಗಿದೆ. ಜೊತೆಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು ಈ ಮೇಲಿನ ವಿವರಗಳನ್ನು ಶಿಕ್ಷಕರ ಗಮನಕ್ಕೆ ತರಬೇಕೆಂದು ಕೋರಲಾಗಿದೆ. ಸೂಕ್ತ ವಿವರಗಳು ಮತ್ತು ಅಧಿಕೃತ ದಾಖಲೆಗಳನ್ನು ವೆಬ್‌ಸೈಟ್ ಮೂಲಕ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 25.06.2019.

ಕುಲಸಚಿವರು
ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕಾ, ಕೋಲಾರ–ಕರ್ನಾಟಕ–563 103.

ಗೆ,
ಸಂಯೋಜಿತ ಕಾಲೇಜುಗಳ ಎಲ್ಲಾ ಪ್ರಾಂಶುಪಾಲರುಗಳು ಮತ್ತು ಶಿಕ್ಷಕರು,
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ



Scanned by CamScanner